ಇ)	ಆಶ್ರಯ	ಅಂಬೇಡ್ಕರ್	ಇಂದಿರಾ ಆವಾಜ್
	5581.04 ಲಕ್ಷಗಳು	1263.00 ಲಕ್ಷಗಳು	3145.89 ಲಕ್ಷಗಳು

ಈ) ಹೌದು.

ಉ) ಈ ನಿಗಮವನ್ನು ರಾಜ್ಯದ ಆರ್ಥಿಕವಾಗಿ ಹಿಂದುಳಿದ ಜನರಿಗಾಗಿ ಹಮ್ಮಿಕೊಂಡ ಆಶ್ರಯ ಅಂಬೇಡ್ಕರ್ ವಿಶೇಷ ವೃತ್ತಿ ನಿರತದವರಾದ ಹಮಾಲರು, ನೇಕಾರರು, ಮೀನುಗಾರರು ಬೀಡಿ ಕಾರ್ಮಿಕರು ಮುಂತಾದವರಿಗಾಗಿ ಇರುವ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಚಿಸಲಾಗಿದೆ. ಈ ನಿಗಮಕ್ಕೆ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಪೂರಕ ಸಿಬ್ಬಂದಿಯಿದ್ದು, ಈ ನಿಗಮದಲ್ಲಿ 3 ಕೋಟಿಗಳ ಶೇರು ಬಂಡವಾಳವನ್ನು ಹೂಡಲಾಗಿದೆ. ಸರ್ಕಾರವು ವಹಿಸಿದೆ ವಸತಿ ಯೋಜನೆಗಳನ್ನು ಸರ್ಕಾರದ ಅನುದಾನವಲ್ಲದೇ ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.

ಲಘು ಮೋಟಾರು ವಾಹನಗಳಿಗೆ ಅಡುಗೆ ಅನಿಲ ಅಳವಡಿಸಲು ಪರವಾನಿಗೆ ಕೊಡುವುದು

2984 - ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಡಿಗೆ ಅನಿಲವನ್ನು ಅಳವಡಿಸಲು ಲಘು ಮೋಟಾರು ವಾಹನಗಳಿಗೆ ಪರವಾನಗಿ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ತರಲಾಗಿದೆಯೇ?

ಇ) ಪರವಾನಗಿ ಇಲ್ಲದೆ ಲಘು ಮೋಟಾರು ವಾಹನಗಳಿಗೆ ಅಕ್ರಮವಾಗಿ ಅಡಿಗೆ ಅನಿಲವನ್ನು ಉಪಯೋಗಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉ) ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಲಘು ವಾಹನಗಳು ಅಡಿಗೆ ಅನಿಲ ಸೋರಿಕೆಯಿಂದ ಮುಂಜಾಗ್ರತೆ ಇಲ್ಲದೆ ನಿರ್ಲಕ್ಷ್ಯದಿಂದ ಬೆಂಕಿ ಹೊತ್ತಿಕೊಂಡು ಸುಟ್ಟಿರುವ ವಾಹನಗಳು ಪ್ರಕರಣಗಳೆಷ್ಟು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಇದುವರೆವಿಗೂ ತಿದ್ದುಪಡಿ ಆಗಿರುವುದಿಲ್ಲ.

ಇ) ಬಂದಿದೆ.

ಈ) ಮೋಟಾರು ವಾಹನ ಶಾಸನಕ್ಕೆ ಸೂಕ್ತ ತಿದ್ದುಪಡಿ ತರುವವರಿಗೆ ಹಾಗೂ ಭಾರತ ಸರ್ಕಾರವು ಈ ಬಗ್ಗೆ ಭದ್ರತಾ ಕ್ರಮವನ್ನು ನಿಗಧಿಪಡಿಸುವವರೆಗೆ ಅಡಿಗೆ ಅನಿಲವನ್ನು ವಾಹನಗಳಿಗೆ ಅಳವಡಿಸಬಾರದೆಂದು ವಾಹನ ಮಾಲೀಕರಿಗೆ ಹಾಗೂ ಸಾರ್ವಜನಿಕರಿಗೆ ತಿಳಿಸಲಾಗಿದೆ.

ಉ) ಮೂರು.

ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಹೊಸ ಬಸ್ ಡಿಪೋ ತೆರೆಯುವುದು

2985 - ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಬಸ್ ಡಿಪೋಗಳಿವೆ? ಅವರಲ್ಲಿ ಮಹಾನಗರ ಪಾಲಿಕೆಗಳು ಹಾಗೂ ಕೆ.ಎಸ್.ಆರ್.ಟಿ.ಸಿ.ಗಳಿಗೆ ಸಂಬಂಧಿಸಿದಂತೆ ಡಿಪೋಗಳ ಸಂಖ್ಯೆ ಎಷ್ಟು? (ಪ್ರತ್ಯೇಕವಾಗಿ ವಿವರ ಒದಗಿಸುವುದು)

ಆ) ಹಾಲಿ ಪ್ರಗತಿಯಲ್ಲಿರುವ ಡಿಪೋಗಳ ಸಂಖ್ಯೆ ಎಷ್ಟು ?

ಇ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಹೊಸದಾಗಿ ಬಸ್ ಡಿಪೋ ತೆರೆಯುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆಯೆ? ಇದ್ದಲ್ಲಿ ಯಾವ ಹಂತದಲ್ಲಿದೆ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಒಟ್ಟು 126 ಡಿಪೋಗಳಿವೆ, ಮಹಾನಗರ ಸಾರಿಗೆಯಲ್ಲಿ 17, ಕೆ.ಎಸ್.ಆರ್.ಟಿ.ಸಿ. ಯಲ್ಲಿ 43, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 40 ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 26 ಡಿಪೋಗಳಿರುತ್ತದೆ. (ಅನುಬಂಧ - ಅ ಅವಗಾಹನೆಗೆ ಲಗತ್ತಿಸಲಾಗಿದೆ)

ಆ) 13 ಸಂಖ್ಯೆಗಳು.

ಇ) ಸರ್ಕಾರದ ಮುಂದೆ ಇಂತಹ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದಿಲ್ಲ.